ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ, ಬೆಂಗಳೂರು-12

ಕಡತ ಸಂಖ್ಯೆ:ಪಪೂಶಿ/ಶೈ.ಶಾ/ದ್ವಿದಾ.ಅ/2016-17 ದಿನಾಂಕ 18-07-2016.

# ಸುತ್ತೋಲೆ

ವಿಷಯ: 2016-17ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ತರಗತಿಗಳಿಗೆ ದಾಖಲಾಗಲು ಅನುಮತಿ ಕುರಿತು.

ಉಲ್ಲೇಖ: ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಬಂದ ಮನವಿಗಳು

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2016-17ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲು **ದಿನಾಂಕ 15-07-2016** ರವರೆಗೆ ಅಂತಿಮವಾಗಿ ದಿನಾಂಕವನ್ನು ವಿಸ್ತರಿಸಲಾಗಿತ್ತು. ವಿದ್ಯಾರ್ಥಿಗಳ ಮತ್ತು ಪೋಷಕರ ಒತ್ತಾಯದ ಹಿನ್ನೆಲೆಯಲ್ಲಿ ಪ್ರಥಮ ಪಿಯುಸಿ ತರಗತಿಗೆ ದಾಖಲಾತಿ ಬಯಸುವ ಎಲ್ಲಾ ವಿದ್ಯಾರ್ಥಿಗಳಿಗೆ **ದಿನಾಂಕ 23-07-2016** ರವರೆಗೆ ವಿಸ್ತರಿಸಲಾಗಿದೆ. ದಾಖಲಾತಿಗೆ ನಿಗಧಿಪಡಿಸಿರುವ ಶುಲ್ಕಗಳೊಂದಿಗೆ ವಿದ್ಯಾರ್ಥಿಗಳಿಂದ ಅವರ ಹಾಜರಾತಿಯನ್ನು ಶೇ75% ಕಾಯ್ದಿರಿಸಿಕೊಳ್ಳುವ ಕುರಿತು ಮುಚ್ಚಳಿಕೆಯನ್ನು ಪಡೆದುಕೊಂಡು ನಂತರವೇ ಕಾಲೇಜಿನ ಪ್ರಾಂಶುಪಾಲರು ಈ ಕೆಳಕಂಡ ದಂಡ ಶುಲ್ಕ ಪಡೆದು ನಿಯಮಾನುಸಾರ ದಾಖಲಾತಿಯನ್ನು ಮಾಡಿಕೊಳ್ಳುವುದು.

| | | | |
|---|---|---|---|
| ಎಸ್ ಎಸ್ ಎಲ್ ಸಿ ಮಾರ್ಚ್ 2016ರ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ದಾಖಲಾತಿ ಕುರಿತು | ದಂಡ ಶುಲ್ಕ ರೂ.504/- | ವಿಶೇಷ ದಂಡ ಶುಲ್ಕ ರೂ.1,680/- | ಒಟ್ಟು ದಂಡ ಶುಲ್ಕ ರೂ.2,184/- |
| ಎಸ್ ಎಸ್ ಎಲ್ ಸಿ ಜೂನ್ 2016ರ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ದಾಖಲಾತಿ ಕುರಿತು (ಪೂರಕ ಪರೀಕ್ಷೆ) | ದಂಡ ಶುಲ್ಕ ವಿಲ್ಲದೆ | | |

ಮಾನ್ಯ ನಿರ್ದೇಶಕರ ಆದೇಶ ಮೇರೆಗೆ

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ:

1. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ-ಮಾಹಿತಿಗಾಗಿ
2. 'ಇ' ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ,
3. ಕಛೇರಿ ಪ್ರತಿ.